C.C.. No. 864/2023 CW:14 ,PW: 14

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 864/2023
ಸಿ.ಡಬ್ಲ್ಯೂಃ 14
ಪಿ.ಡಬ್ಲ್ಯೂಃ 14

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀನಾಥ ರೆಡ್ಡಿ |
| ತಂದೆಯ ಹೆಸರುಃ | ವೆಂಕಟಶಾಮ ರೆಡ್ಡಿ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ಪಿಎಸ್ಐ ಗೋಣಿ ಬೀಡು ಪೊ.ಠಾಣೆ |
| ವಾಸಸ್ಥಳಃ | ಮೂಡಿಗೆರೆ |

ದಿನಾಂಕ 06-08-2026 ರಂದು ಸಾಕ್ಷಿಯನ್ನು ವಿ.ಸಿ. ಮೂಲಕ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಜನವರಿ 2023 ರಿಂದ ಜೂನ್ 2023 ರ ವರೆಗೆ ನಾನು ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 28-02-2023 ರಂದು ಸದರಿ ಪ್ರಕರಣದ ಕಡತವನ್ನು ಚಾ.ಸಾ.13 ರವರಿಂದ ಪಡೆದು ಕಡತ ಪರಿಶೀಲಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ.

3.ದಿನಾಂಕ 28-02-2023 ರಂದು ಅಪಘಾತ ನಡೆದ ಸ್ಥಳದಲ್ಲಿ ಚಾ.ಸಾ.1 ರವರು ತೋರಿಸಿದ ಜಾಗದಲ್ಲಿ ಚಾ.ಸಾ.6 ಮತ್ತು 7 ರವರ ಸಮಕ್ಷಮ ಅಪಘಾತ ಸ್ಥಳ ಮಹಜರು ಮತ್ತು ಕರಾಡು ನಕಾಶೆಯನ್ನು ತಯಾರಿಸಿರುತ್ತೇನೆ. ಸ್ಥಳದಲ್ಲಿ ಒಂದು ಕಾರಿನ ಸೈಡ್ ಮಿರರ್ ಗ್ಲಾಸ್ , ಸೈಡ್ ಮಿರರ್ ಕವರ್ , ಹಾಗೂ 15 ಇಂಚು ಉದ್ದದ ಫೈಬರ್ ಫೀಸ್ ಮತ್ತು ಅಪಘಾತಕ್ಕೊಳಪಟ್ಟ ಕೆಎ-21-ವೈ -6146 ನೋಂದಣಿ ಸಂಖ್ಯೆಯ ಸ್ಕೂಟರ್ ನ್ನು ನನ್ನ ವಶ ಪಡೆದಿದ್ದೇನೆ. ನಂತರ ಅದೇ ದಿನ ಚಾ.ಸಾ4 ಮತ್ತು ಚಾಸಾ.5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತುಪಡಿಸಿಕೊಂಡ ಮಾಲುಗಳನ್ನು PF no.15/2023 ಕ್ಕೆ ನೋಂದಾಯಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ RTO ಪುತ್ತೂರು ರವರಿಗೆ ಅಮಾನತುಪಡಿಸಿಕೊಂಡ

ವಾಹನವನ್ನು ಪರಿಶೀಲಿಸಿ ವರದಿ ನೀಡಲು ಮನವಿ ಪತ್ರವನ್ನು ನೀಡಿರುತ್ತೇನೆ. ಅದೇ ದಿನ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ಗಾಯಾಳುವಿನ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ಮನವಿ ಪತ್ರವನ್ನು ನೀಡಿರುತ್ತೇನೆ.

4. ದಿನಾಂಕ 02-03-2023 ಪ್ರಕರಣದ ಆರೋಪಿಯು ಕೃತ್ಯಕ್ಕೆ ಬಳಸಿದ ವಾಹನವನ್ನು ಹಾಜರುಪಡಿಸಿದ ಮೇರೆಗೆ ಪಂಚರಾದ ಚಾ.ಸಾ.8 ಮತ್ತು ಚಾ.ಸಾ.9 ರವರ ಸಮಕ್ಷಮ ಅದೇ ದಿನ ಠಾಣಾ ಆವರಣದಲ್ಲಿ ರಾತ್ರಿ 08.00-08.30 ರ ಅವಧಿಯಲ್ಲಿ ಪಿವೈ-05-ಎ-3789 ನೋಂದಣಿ ಸಂಖ್ಯೆಯ ಬಿಳಿಬಣ್ಣದ ಬೆಂಜ್ ಕಾರನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ವಾಹನವನ್ನು ಪರೀಶೀಲಿಸಿ ವರದಿ ನೀಡುವಂತೆ RTO ಪುತ್ತೂರು ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ನಂತರ ಪ್ರಕರಣದ ಆರೋಪಿಗೆ ಕಲಂ 133 ಐಎಂವಿ ಕಾಯ್ದೆಯಂತೆ ನೋಟೀಸು ಜ್ಯಾರಿಗೊಳಿಸಿ ಸದರಿ ವಾಹನದ ಮಾಲೀಕತ್ವ ಮತ್ತು ಇತರ ದಾಖಾಲಾತಿಗಳ ಮಾಹಿತಿ ಒದಗಿಸುವಂತೆ ಕೇಳಿರುತ್ತೇನೆ. ನಂತರ ಆರೋಪಿಗೆ ಕಲಂ 41(ಎ) Cr.PC ಯಡಿ ನೋಟೀಸು ಜ್ಯಾರಿಗೊಳಿಸಿರುತ್ತೇನೆ.

5. ನಂತರ ಅದೇ ದಿನ ಗಾಯಾಳು ಹೇಮಲತಾ ರವರನ್ನು ಠಾಣೆಗೆ ಕರೆಸಿ ಅಪಘಾತದ ಕಾರನ್ನು ಗುರುತಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ದಿನಾಂಕ 06-03-2023 ರಂದು ಬೆಂಜ್ ವಾಹನವನ್ನು ನಷ್ಟ ಭರ್ತಿ ಬಾಂಡ್ ಪಡೆದು ಅದರ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 20-03-2023 ರಂದು ಗಾಯಾಳು ಗಂಗಾಧರ ಗೌಡ ರವರ ಹೇಳಿಕೆಯನ್ನು ಪಡೆದಿರುತ್ತೇನೆ ಹಾಗೂ ಅದೇ ದಿನ ಹರೀಶ್ ರವರಿಂದ ಕಲಂ 65(ಬಿ) ಭಾ. ಸಾ. ಅ. ನಿಯಮದಂತೆ ದೃಢಪತ್ರವನ್ನು ಸ್ವೀಕರಿಸಿರುತ್ತೇನೆ. ಪುತ್ತೂರು RTO ಕಚೇರಿಯಿಂದ ವಾಹನಗಳ ಐಎಂವಿ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ.15 ರವರಿಗೆ ವಹಿಸಿಕೊಟ್ಟಿರುತ್ತೇನೆ.

6. ನಾನು ತಯಾರಿಸಿದ ಸ್ಥಳ ಮಹಜರು , ಕರಡು ನಕಾಶೆ , ಸ್ವತ್ತು ಸ್ವಾಧೀನತಾ ಮಹಜರು , ಚಾ.ಸಾ.10 ರವರಿಗೆ ನೀಡಿದ ಕಲಂ 133 ರಡಿಯ ನೋಟೀಸು , ಅದಕ್ಕೆ ಅವರು ನೀಡಿದ ಉತ್ತರ, ನಷ್ಟ ಭರ್ತಿ ಬಾಂಡ್ , ಚಾ.ಸಾ.11 ರವರು ನೀಡಿರುವ IMV ವರದಿ , ಆರೋಪಿಗೆ ನೀಡಿದ ಕಲಂ 133 ರಡಿಯ ನೋಟೀಸು , ಅದಕ್ಕೆ ಅವರು ನೀಡಿದ ಉತ್ತರದ ನಷ್ಟ ಭರ್ತಿ ಬಾಂಡ್, ಚಾ.ಸಾ.11 ರವರು ನೀಡಿರುವ ಕಲಂ 65(ಬಿ) ದೃಢಪತ್ರಗಳನ್ನು ಹಾಗೂ ಅವುಗಳಲ್ಲಿನ ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ.

7. ಸ್ಥಳ ಮಹಜರು , ಕರಡು ನಕಾಶೆ , ಸ್ವತ್ತು ಸ್ವಾಧೀನತಾ ಮಹಜರು, ಚಾ.ಸಾ.10 ರವರಿಗೆ ನೀಡಿದ ಕಲಂ 133 ರಡಿಯ ನೋಟೀಸು , ಅದಕ್ಕೆ ಅವರು ನೀಡಿದ ಉತ್ತರ, ನಷ್ಟ ಭರ್ತಿ ಬಾಂಡ್ , ಚಾ.ಸಾ.11 ರವರು ನೀಡಿರುವ IMV ವರದಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.2, ನಿ.ಪಿ.3, ನಿ.ಪಿ.8 ರಿಂದ ನಿ.ಪಿ.11, ನಿ.ಪಿ.15 ಎಂದು ಗುರುತಿಸಲಾಗಿದ್ದು , ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿ.ಪಿ.2(ಡಿ) ,ನಿ.ಪಿ. 3(ಡಿ) ,ನಿ.ಪಿ. 8(ಸಿ), ನಿ.ಪಿ.9(ಬಿ), ನಿ.ಪಿ.10(ಬಿ),ನಿ.ಪಿ.11(ಬಿ), ನಿ.ಪಿ.15 (ಬಿ) ಎಂದು ಗುರುತಿಸಲಾಯಿತು.

8.ಆರೋಪಿಗೆ ನೀಡಿದ ಕಲಂ 133 ರಡಿಯ ನೋಟೀಸು , ಅದಕ್ಕೆ ಅವರು ನೀಡಿದ ಉತ್ತರದ ನಷ್ಟ ಭರ್ತಿ ಬಾಂಡ್, ಚಾ.ಸಾ.11 ರವರು ನೀಡಿರುವ ಕಲಂ 65ಬಿ ದೃಢಪತ್ರ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.16 ರಿಂದ ನಿ.ಪಿ.19 ಎಂದು ಹಾಗೂ ಅವುಗಳಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ರಿಂದ ನಿ.ಪಿ.18(ಎ) ಎಂದು ಗುರುತಿಸಲಾಯಿತು. ಚಾ.ಸಾ.4 ಮತ್ತು ಚಾ.ಸಾ.5 ರವರು ನನ್ನ ಸಮಕ್ಷಮ ನಿ.ಪಿ.6 ಮತ್ತು ನಿ.ಪಿ.7 ರಂತೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

9.ಮಹಜರು ಕಾಲದಲ್ಲಿ ವಶಪಡಿಸಿಕೊಂಡು ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವರಿಗೆ ತೋರಿಸಿದ ವಸ್ತುಗಳನ್ನು ನೋಡಿ ಗುರುತಿಸಿದ್ದು . ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲಾಗಿರುತ್ತದೆ. ನಾನು ವಶಪಡಿಸಿಕೊಂಡ ಸ್ಕೂಟರ್ ಮತ್ತು ಕಾರಿನ ಬಾವಚಿತ್ರಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿ.ಪಿ.4 ಮತ್ತು 5 ರಲ್ಲಿ ಕಾಣುವ ಸ್ಕೂಟರ್ ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ.

10.ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯಕ್ಕೆ ಆರೋಪಿ ಗೈರುಹಾಜರಾಗಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಬಿ.ಎನ್.ಪಿ. ವಕೀಲರಿಂದಃ**

11.ಅಪಘಾತ ಆದ ಸ್ಥಳದಲ್ಲಿ ಸ್ಕೂಟರ್ ಇರಲಿಲ್ಲ , ಸ್ಥಳದಿಂದ 5 ಅಡಿ ದೂರದಲ್ಲಿ ರಸ್ತೆ ಪಕ್ಕದಲ್ಲಿ ವಾಹನವನ್ನು ನಿಲ್ಲಿಸಲಾಗಿತ್ತು. ದೂರುದಾರರು ನಮ್ಮ ಮನೆಗೆ ಹೋಗಲು ಬಳಸುವ ಅಪಘಾತ ಸ್ಥಳದ ಬಲಬದಿಯಲ್ಲಿ ಇದ್ದ ರಸ್ತೆಯನ್ನು ನನಗೆ ತೋರಿಸಿಲ್ಲ. ಅಪಘಾತ ಆದ ಸ್ಥಳದ ಎದುರು ಅಥವಾ ಹತ್ತಿರ ಬಸ್ ನಿಲ್ದಾಣ ಇರಲಿಲ್ಲ. ಸ್ಥಳ ಮಹಜರು ಸಮಯದಲ್ಲಿ ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರು ಅಪಘಾತ ಆಗುವ ಸಮಯದಲ್ಲಿ ಎಲ್ಲಿ ನಿಂತು ವೀಕ್ಷಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಸ್ಥಳ ಮಹಜರು ಅಥವಾ ನಕ್ಷೆಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರು ಎಲ್ಲಿ ನಿಂತು

ಅಪಘಾತವನ್ನು ನೋಡಿದರು ಎಂದು ನಮೂದು ಇಲ್ಲ. ಅಪಘಾತ ಕಾಲದಲ್ಲಿ ಕಾರಿನ ಯಾವ ಭಾಗ ಸ್ಕೂಟರ್ ನ ಯಾವ ಭಾಗಕ್ಕೆ ಡಿಕ್ಕಿ ಪಡಿಸಿದೆ ಎಂದು ಪ್ರತ್ಯಕ್ಷ ಸಾಕ್ಷಿದಾರರು ನನಗೆ ತಿಳಿಸಿದ್ದಾರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ, ಮುಂದುವರಿದು ಸ್ಕೂಟಿಯ ಬಲಭಾಗ ಹಾಗೂ ಕಾರಿನ ಎಡಭಾಗಕ್ಕೆ ಜಖಂ ಗೊಂಡಿದೆ ಎಂದು ನುಡಿಯುತ್ತಾರೆ. ಸ್ಕೂಟಿಯ ಬಲಭಾಗಕ್ಕೆ ಕಾರಿನ ಎಡಭಾಗಕ್ಕೆ ತಾಗಿದೆ ಎಂದು ಯಾವುದೇ ಸಾಕ್ಷಿದಾರರು ನನಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ಕೂಟಿಯ ಬಲಭಾಗದ ಹ್ಯಾಂಡಲ್ ಹತ್ತಿರ ಜಖಂಗೊಂಡಿದ್ದನ್ನು ನಾನು ಸ್ಥಳ ಮಹಜರು ಕಾಲದಲ್ಲಿ ನೋಡಿದ್ದೇನೆ.

12.ನನ್ನ ತನಿಖಾ ಕಾಲದಲ್ಲಿ ಸ್ಕೂಟಿಯ ಬಲಭಾಗ ಹಾಗೂ ಕಾರಿನ ಎಡಭಾಗ ಜಖಂ ಗೊಂಡ ಬಗ್ಗೆ ಸದರಿ ಅಪಘಾತದಿಂದ ಸಾಧ್ಯವಿದೆಯೇ ಎಂದು RTO ರವರಲ್ಲಿ ನಾನು ವರದಿ ಕೇಳಿಲ್ಲ.

13.ಮು.ಮಾ.1 ರಿಂದ 3 ಅಪಘಾತ ಸ್ಥಳದ ಬಲಬದಿಗೆ ಬಿದ್ದಿತ್ತು. ಮು.ಮಾ.1 ರಿಂದ 3 ಅಪಘಾತ ಸ್ಥಳದಲ್ಲಿ ಬಿದ್ದಿತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆ ವಸ್ತುಗಳನ್ನು ಚಾ.ಸಾ.1 ರವರು ಪೊಲೀಸು ಠಾಣೆಗೆ ತಂದು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ನಾನು ವಶಪಡಿಸಿಕೊಂಡ ಬೆಂಜ್ ಕಾರಿಗೆ ಅಳವಡಿಸಿದ ಬಿಡಿಭಾಗಗಳು ಎಂದು ಗುರುತಿಸಿಕೊಳ್ಳಲು ಬೆಂಜ್ ಕಾರಿನ ಸರ್ವಿಸ್ ಸೆಂಟರ್ ಗೆ ವರದಿ ಕೋರಿ ಮನವಿ ಸಲ್ಲಿಸಿಲ್ಲ. ಅಪಘಾತಕ್ಕೀಡಾದ ಸ್ಕೂಟರ್ ನ ಯಾವುದೇ ಭಾಗದಲ್ಲಿ ಕಾರಿನ ಬಿಳಿ ಬಣ್ಣ ಅಂಟಿದ್ದ ಇದ್ದ ಬಗ್ಗೆ ಮತ್ತು ಅದನ್ನು ನಾನು ಜಪ್ತು ಪಡಿಸಿಕೊಂಡ ಬಗ್ಗೆ ನನಗೆ ಈಗ ನೆನಪಿಲ್ಲ. ಮು.ಮಾ.1 ರಿಂದ 3 ನಾನು ವಶಪಡಿಸಿಕೊಳ್ಳಲಾದ ಬೆಂಜ್ ಕಾರಿಗೆ ಅಳವಡಿಸಿದ ಬಿಡಿಭಾಗಗಳು ಅಲ್ಲ ಎಂದರೆ ಸರಿಯಲ್ಲ.

14. ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಿದ ಎಲ್ಲಾ ವ್ಯಕ್ತಿಗಳು ಚಾ,ಸಾ.1 ರವರ ಸ್ನೇಹಿತರು ಅಥವಾ ಸಂಬಂಧಿಕರು ಎಂದರೆ ಸರಿಯಲ್ಲ. ಪಂಚರಿಗೆ ಮಹಜರು ಕಾಲದಲ್ಲಿ ಹಾಜರಿರುವಂತೆ ಕೋರಿಕೊಂಡು ನಾನು ನೋಟೀಸು ಕೊಟ್ಟಿದ್ದೇನೆ. ನಾನು ಸ್ಥಳದಲ್ಲಿಯೇ ನೋಟೀಸು ಕೊಟ್ಟಿದ್ದೇನೆ. ಪಂಚರನ್ನು ಸ್ಥಳಕ್ಕೆ ಬರಲು ಯಾರು ಹೇಳಿದ್ದು ಎಂದರೆ ಸಾಕ್ಷಿಯು ನಾನು ನೋಟೀಸು ಕೊಟ್ಟು ಅವರನ್ನು ಬರಲು ಹೇಳಿದ್ದೆನು.

15. ಸ್ಥಳ ಮಹಜರನ್ನು ನಾನು ಪೊಲೀಸು ಠಾಣೆಯಲ್ಲಿಯೇ ತಯಾರಿಸಿದ್ದು ತಕ್ಷೀರು ಸ್ಥಳದಲ್ಲಿ ಅಲ್ಲ ಎಂದರೆ ಸರಿಯಲ್ಲ. ಹರೀಶ್ ಮತ್ತು ರಜನೀಶ್ ನನಗೆ ನಿ.ಪಿ.6 ಮತ್ತು ನಿ.ಪಿ.7 ರಂತೆ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

16. ಅಪಘಾತಪಡಿಸಿದ ವಾಹನದ ಮಾಲೀಕರನ್ನು ನನ್ನ ತನಿಖಾ ಕಾಲದಲ್ಲಿ ಹುಡುಕುತ್ತಿದ್ದಾಗ ಆರೋಪಿ ಠಾಣೆಗೆ ಹಾಜರಾಗಿ ಕಾರನ್ನು ಹಾಜರುಪಡಿಸಿದ್ದಾರೆ. ದಿನಾಂಕ 02-03-2023 ರಂದು ಕಾರನ್ನು ಆರೋಪಿ ತಂದು ಹಾಜರುಪಡಿಸಿದ್ದಾರೆ. ದಿನಾಂಕ 02-03-2023 ರಂದು ಆರೋಪಿಯೇ ಕಾರನ್ನು ತಂದು ಪೊಲೀಸು ಠಾಣೆಯಲ್ಲಿ ಹಾಜರುಪಡಿಸಿದ್ದಾರೆ ಎಂದು ನಿ.ಪಿ.8 ದಾಖಲೆಯನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ ದಿನಾಂಕ ಕೈಬರವಣಿಗೆಯಲ್ಲಿ ಇದೆ ಎಂದರೆ ಸರಿ. ಪ್ರಿಂಟ್ ಔಟ್ ತೆಗೆದಾಗ ಅದು ಸರಿ ಬರದ ಕಾರಣ ಅದನ್ನು ಕೈ ಬರಹದಲ್ಲಿ ಬರೆಯಲಾಗಿದೆ. ಪ್ರಿಂಟ್ ಔಟ್ ಸರಿಯಾಗಿ ಬಾರದಿದ್ದರೆ ಎಲ್ಲಾ ದಾಖಲೆಗಳಲ್ಲಿ ದಿನಾಂಕ 02-03-2023 ಎಂದು ಕೈಬರವಣಿಗೆಯಲ್ಲಿ ಬರೆಯಬೇಕಾಗಿತ್ತು ಎಂದರೆ ಸರಿಯಲ್ಲ. ನನ್ನ ಪ್ರಕಾರ ದಿನಾಂಕ 02-03-2023 ರಂದು ಆರೋಪಿಯು ಕಾರನ್ನು ಪೊಲೀಸು ಠಾಣೆಗೆ ತಂದು ಹಾಜರುಪಡಿಸಿದ್ದಾರೆ. ದಿನಾಂಕ 02-03-2023 ರಂದು ಆರೋಪಿಗೆ ಇಂತಹ ದಿನಾಂಕದೊಳಗೆ ಕಾರನ್ನು ತಂದು ಹಾಜರುಪಡಿಸಬೇಕೆಂದು ಆರೋಪಿಗೆ ನೋಟೀಸು ಜ್ಯಾರಿ ಮಾಡಿದ ಬಗ್ಗೆ ನೆನಪಿಲ್ಲ. ದಿನಾಂಕ 02-03-2023 ರಂದು ಆರೋಪಿಗೆ 04-03-2023 ರಂದು ಬೆಳಿಗ್ಗೆ 10.00 ಗಂಟೆಗೆ ಕಾರನ್ನು ತಂದು ಹಾಜರುಪಡಿಸಬೇಕೆಂದು ನೋಟೀಸು ಕೊಟ್ಟ ಬಗ್ಗೆ ನೆನಪಿಲ್ಲ.

17.ಆರೋಪಿಗೆ ಸೇರಿದ ಕಾರು ಅಪಘಾತದಲ್ಲಿ ಭಾಗಿಯಾಗಿಲ್ಲ ಆದರೂ ಕೂಡಾ ಚಾ.ಸಾ.1 ರವರ ತಂದೆತಾಯಿಗಳಿಗೆ ವಿಮಾ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಆರೋಪಿಯ ಕಾರು ಅಪಘಾತದಲ್ಲಿ ಭಾಗಿಯಾಗಿದೆ ಎಂದು ಸುಳ್ಳು ದಾಖಲಾತಿ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.